**ಡಿ.ಡಬ್ಲುಃ 2**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ದಿನಾಂಕಃ 30-08-2024**

**ಪಾಟೀಸವಾಲುಃ 11ನೇ ಪ್ರತಿವಾದಿ ಪರ ಶ್ರೀ ಎನ್.ಈ.ಹೆಚ್. ವಕೀಲರಿಂದ,**

ದಾವಾಸ್ತಿಗಳು ನನ್ನ ಅಜ್ಜ ಸೋಮಯ್ಯ ಈರಯ್ಯ ನಾಯ್ಕ ರವರ ಮತ್ತು ಅವರ ತಮ್ಮ ದುರ್ಗಪ್ಪ ಈರಯ್ಯ ನಾಯ್ಕ ರವರ ಆಸ್ತಿಯೆಂದರೆ ಸರಿ. ಸದರಿಯವರು ತಮ್ಮ ಜೀವಿತಾವಧಿಯಲ್ಲಿ ಅವರುಗಳು ತಮ್ಮ ಆಸ್ತಿಯಲ್ಲಿ ಮೌಖಿಕವಾಗಿ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ನಂತರ ನನ್ನ ಅಜ್ಜ ಸೋಮಯ್ಯ ಈರಯ್ಯ ನಾಯ್ಕ ರವರು ಮತ್ತು ಪ್ರತಿವಾದಿ ನಂ.5 ರಿಂದ 10 ನೇಯವರು ಕೂಡಿಕೊಂಡು ಅವರಿಗೆ ಬಂದಂತಹ 36 ಗುಂಟೆಯನ್ನು ನನಗೆ ನೋಂದಾಯಿತ ದಾನ ಪತ್ರದ ಮೂಲಕ ಬರೆದುಕೊಟ್ಟಿದ್ದರು ಎಂದರೆ ಸರಿ. ದಾನ ಪತ್ರದ ನಂತರ ಸದರಿ ಆಸ್ತಿಯಲ್ಲಿ ನಾನೇ ಕಬ್ಜಾ ವಹಿವಾಟು ಮಾಡಿಕೊಂಡು ಬಂದಿದ್ದೆನು ಎಂದರೆ ಸರಿ. ನಾನು ಕಬ್ಜಾ ವಹಿವಾಟು ಮಾಡಿಕೊಂಡು ಬರುತ್ತಿದ್ದ ಸರ್ವೆ ನಂ.680/2 ಕ್ಷೇತ್ರ 36 ಗುಂಟೆ ಎಂದರೆ ಸರಿ. ನಂತರ ನಾನು ನನ್ನ ಕೌಟುಂಬಿಕ ಹಣಕಾಸಿನ ತೊಂದರೆಗಾಗಿ ಸದರಿ ಆಸ್ತಿಯಲ್ಲಿ 6 ಗುಂಟೆ ಜಾಗವನ್ನು 11ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿ. ಆ ಬಗ್ಗೆ 11ನೇ ಪ್ರತಿವಾದಿಗೆ ದಿ.02-04-2011 ರಂದು ಶುದ್ಧ ಕ್ರಯ ಪತ್ರ ಬರೆದುಕೊಟ್ಟಿದ್ದೆ ಎಂದರೆ ಸರಿ. ಕ್ರಯ ಪತ್ರದಂತೆ, 11ನೇ ಪ್ರತಿವಾದಿಯ ಹೆಸರು 6 ಗುಂಟೆಯ ಕ್ಷೇತ್ರಕ್ಕೆ ಗೇಣಿ ಮತ್ತು ಪಹಣಿ ಪತ್ರದಲ್ಲಿ ಹೆಸರು ದಾಖಲಾಗಿದೆ ಎಂದರೆ ಸರಿ. ಕ್ರಯ ಪತ್ರದ ದಿನಾಂಕದಿಂದ ಇಂದಿನವರೆಗೆ 11ನೇ ಪ್ರತಿವಾದಿ ತಾನು ಖರೀದಿಸಿದ 6 ಗುಂಟೆ ಕ್ಷೇತ್ರದಲ್ಲಿ ಕಬ್ಜಾ ವಹಿವಾಟಿನಲ್ಲಿರುತ್ತಾರೆ ಎಂದರೆ ಸರಿ. 11ನೇ ಪ್ರತಿವಾದಿ ತನ್ನ ಆಸ್ತಿಯಲ್ಲಿ ಸಾಕಷ್ಟು ಹಣ ಖರ್ಚು ಮಾಡಿ, ಕಂಪೌಂಡ್ ಹಾಕಿಕೊಂಡಿದ್ದಾರೆ ಎಂದರೆ ಸರಿ. 11ನೇ ಪ್ರತಿವಾದಿ ತನ್ನ 6 ಗುಂಟೆ ಕ್ಷೇತ್ರದ ಪೈಕಿ, 5 ಗುಂಟೆ ಕ್ಷೇತ್ರವನ್ನು ಬಿನ್ ಶೆತಗಿ ಮಾಡಿಕೊಂಡಿದ್ದಾರೆ ಎಂದರೆ ಸರಿ. 11ನೇ ಪ್ರತಿವಾದಿ ಒಬ್ಬ ಸದ್ಭಾವಿ ಖರೀದಿದಾರ ಎಂದರೆ ಸರಿ. 11 ನೇ ಪ್ರತಿವಾದಿಗೆ ನಾವು ಮಾಡಿಕೊಟ್ಟ ಖರೀದಿ ಪತ್ರಕ್ಕೆ ನಮ್ಮದು ಯಾವುದೇ ತಕರಾರು ಇಲ್ಲ ಎಂದರೆ ಸರಿ.

**ಪಾಟೀಸವಾಲುಃ ವಾದಿ ಪರ ಶ್ರೀ  ವಕೀಲರಿಂದ,**

(ಈ ಹಂತದಲ್ಲಿ ವಾದಿ ಪರ ವಕೀಲರು ಗೈರು ಹಾಜರಿದ್ದು, ಅವರ ಪರವಾಗಿ ಶ್ರೀ ಎಸ್.ವಿ.ಎ. ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಪ್ರಕರಣ ಮುಂದೂಡಲಾಯಿತು.)

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

*Sd/-*

**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**